ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/26/2015-16** 09.5.5.2016

ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ

| ವಾದಿಗಳು | ಪ್ರತಿವಾದಿಗಳು |
|---|---|
| 1) ಶ್ರೀಮತಿ ಬಿ.ವಿ.ನೀಲಮ್ಮ ಗಂಡ ನಂಜುಂಡಪ್ಪ<br>2) ಶ್ರೀ ಬಿ.ವಿ. ಪರಮೇಶ್ವರಪ್ಪ ತಂದೆ ದಿ॥ ಬಸವಣ್ಯಪ್ಪ<br>3) ಶ್ರೀ ಕೆ. ಜಗದೀಶ, ವಕೀಲರು<br>ಗ್ರಾಮ : ಬನ್ನಿಕಲ್ಲು. | ಶ್ರೀ ಕಂದಾಯ ನಿರೀಕ್ಷಕರು ಹಂಪಸಾಗರ ಹೋಬಳಿ ಹಂಪಸಾಗರ |

ವಿಷಯ : - **ಹಗರಿಬೊಮ್ಮನಹಳ್ಳಿ ತಾಲೂಕು, ಬನ್ನಿಕಲ್ಲು ಗ್ರಾಮಕ್ಕೆ ಸೇರಿದ ಜಮೀನು ಸ.ನಂ.290/3 ವಿಸ್ತೀರ್ಣ 1-27 ಎಕರೆಯಲ್ಲಿನ ಜಂಟೀ ಪಟ್ಟಾದಾರರಾದ ಶ್ರೀ ವಿ.ನಂಜುಂಡಪ್ಪ ಇವರು ಪವತಿಯಾದ್ದರಿಂದ ವಾದಿ (1) ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು-ವಿಚಾರಣೆ.**

**ಪೀಠಿಕೆ :-**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಬನ್ನಿಕಲ್ಲು ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 290/3 ರಲ್ಲಿನ ಜಂಟೀ ಪಟ್ಟಾದಾರರಾದ ಶ್ರೀ ದಿ॥ ನಂಜುಂಡಪ್ಪ ಇವರು ದಿನಾಂಕ: 30-01-2014 ರಂದು ಮರಣ ಹೊಂದಿದ್ದು ಇವರ ವಾರಸು ಹೆಂಡತಿ ವಾದಿ (1) ಇವರು ಪವತಿ ಹಕ್ಕು ಬದಲಾವಣೆ ಹೊಂದಲು ನಿಗದಿತ ನಮೂನೆಯೊಂದಿಗೆ ತಾಲೂಕಾ ಭೂಮಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಅರ್ಜಿಯು ಭೂಮಿ ಕೇಂದ್ರದಲ್ಲಿನ ವಹಿವಾಟು ಸಂಖ್ಯೆ 22 ಹಾಗೂ ಹಕ್ಕು ಬದಲಾವಣೆ ಸಂಖ್ಯೆ H-11/2015-16 ರಂತೆ ವಹಿವಾಟು ನಡೆದು ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21 ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಗ್ರಾಮ ಲೆಕ್ಕಾಧಿಕಾರಿ ಬನ್ನಿಕಲ್ಲು ಇವರು ಹಕ್ಕು ಬದಲಾವಣೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ಜಾರಿ ಮಾಡಲಾಗಿ ಅರ್ಜಿದಾರರು ವಾದಿ (1) ಇವರು ನಮೂನೆ 21 ರ ನೋಟೀಸು ಪಡೆಯಲು ನಿರಾಕರಿಸಿರುವುದಾಗಿಯೂ ಹಾಗೂ ಹೇಳಿಕೆ ನೀಡಲು ನಿರಾಕರಿಸಿರುವುದಾಗಿ ವಿವರಿಸುತ್ತಾ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ

ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 15-10-2015 ರಿಂದ ದಿನಾಂಕ:05-05-2016 ರವರೆಗೆ ವಿಚಾರಣೆ ನಡೆಸಲಾಯಿತು. ವಾದಿಯಾದ ಜಂಟೀ ಪಟ್ಟಾದಾರರಾದ ಶ್ರೀ ಪರಮೇಶ್ವರಪ್ಪ ಇವರ ಪರವಾಗಿ ಶ್ರೀ ಜಗದೀಶ ನ್ಯಾಯವಾದಿಗಳು ವಕಾಲತ್ತು ವಹಿಸಿಕೊಂಡಿರುತ್ತಾರೆ.

ದಾಖಲೆಗಳನ್ನು ಪರಿಶೀಲಿಸಲಾಗಿ ಹಾಲೀ ಪಹಣಿ ದಾಖಲು ನಂಜುಂಡಪ್ಪ ಹಾಗೂ ಪರಮೇಶ್ವರ ಎಂದು ಜಂಟಿಯಾಗಿರುತ್ತದೆ. ಜಂಟೀ ಪಟ್ಟಾದಾರರ ಪೈಕಿ ದಿ॥ ನಂಜುಂಡಪ್ಪ ಇವರು ದಿನಾಂಕ: 30-01-2014 ರಂದು ಮರಣ ಹೊಂದಿದ್ದು ಹಾಜರುಪಡಿಸಿದ ಮರಣ ಪ್ರಮಾಣ ಪತ್ರದ ಪ್ರಕಾರ ಕಂಡು ಬರುತ್ತದೆ. ಹಾಗೂ ಸಲ್ಲಿಸಿರುವ ವಂಶವೃಕ್ಷ ಪರಿಶೀಲಿಸಲಾಗಿ ವಾದಿ (1) ಇವರು ದಿ॥ ವಿ.ನಂಜುಂಡಪ್ಪ ಇವರ ವಾರಸು ಹೆಂಡತಿ ಇರುವುದು ಕಂಡು ಬರುತ್ತದೆ. ಹಾಗೂ ಮೇಲಿನ ವಹಿವಾಟು ಪ್ರಕಾರ ವಾದಿ (1) ಇವರು ಪವತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಹೊಂದಲು ಅರ್ಜಿ ಮಾಡಿಕೊಂಡಿರುತ್ತಾರೆ. ಹಾಗೂ ಜಂಟೀ ಹಕ್ಕುದಾರರ ವಾದಿ (2) ಇವರ ಪರವಾಗಿ ಶ್ರೀ ಜಗದೀಶ ನ್ಯಾಯವಾದಿಗಳು ವಕಾಲತ್ ವಹಿಸಿಕೊಂಡಿದ್ದು ಯಾವುದೇ ಲಿಖಿತ ವಾದ ಮಂಡಿಸಿರುವುದಿಲ್ಲ. ಹಾಗೂ ದಾಖಲೆಗಳ ಪ್ರಕಾರ ನಿಯಮಾನುಸಾರ ಪವತಿ ಹಕ್ಕು ಬದಲಾವಣೆ ಹೊಂದುವುದು ಆದ್ಯ ಕರ್ತವ್ಯವಾಗಿರುತ್ತದೆ. ವಾಸ್ತವಾಂಶ ಹಾಗೂ ದಾಖಲೆಗಳ ಆಧಾರದ ಮೇಲೆ ವಿವಾದಿತ ಜಮೀನನ್ನು ಪವತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಬನ್ನಿಕಲ್ಲು ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 290/3 ವಿಸ್ತೀರ್ಣ 1-27 ಎಕರೆ ಜಮೀನಿನಲ್ಲಿನ ಜಂಟೀ ಹಕ್ಕುದಾರರ ಪೈಕಿ ದಿ॥ ನಂಜುಂಡಪ್ಪ ಇವರ ಹೆಸರನ್ನು ಕಡಿಮೆ ಮಾಡುತ್ತಾ ವಾರಸಾ ಹೆಂಡತಿ ಶ್ರೀಮತಿ ಬಿ.ವಿ.ನೀಲಮ್ಮ ಗಂಡ ದಿ॥ ನಂಜುಂಡಪ್ಪ ಇವರ ಹೆಸರಿನಲ್ಲಿ ಜಂಟೀ ಹಕ್ಕುದಾರರಾದ ಶ್ರೀ ಬಿ.ವಿ.ಪರಮೇಶ್ವರಪ್ಪ ಇವರ ಹೆಸರಿನೊಂದಿಗೆ ಜಂಟಿಯಾಗಿ ಪವತಿ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :-

1) ವಾದಿ ಪ್ರತಿವಾದಿಗಳು
2) ತಾಲೂಕು ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ